## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1130
ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಅ.** 2019 ರಿಂದ 2023ನೇ ಸಾಲಿನವರೆಗೆ ಸಾರಿಗೆ ಇಲಾಖೆಯ ವ್ಯಾಪ್ತಿಗೆ ಬರುವ ಕೆ.ಎಸ್ ಆರ್.ಟಿ.ಸಿ., ಬಿ. ಎಂ.ಟಿ.ಸಿ., ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ. ಮತ್ತು ಎನ್.ಇ.ಕೆ.ಆರ್.ಟಿ.ಸಿ. ಸಂಸ್ಥೆಗಳ ಮೇಲೆ ಇದ್ದ ಸಾಲವೆಷ್ಟು:

2019 ರಿಂದ 2023ನೇ ಸಾಲಿನವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಸಾಲದ ವಿವರಗಳು ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ವರ್ಷ | KSRTC | BMTC | NWKRTC | KKRTC | ಒಟ್ಟು |
|---|---|---|---|---|---|
| 2019-20 | 260.54 | 769.06 | 250.93 | 93.20 | 1373.73 |
| 2020-21 | 353.20 | 944.56 | 280.71 | 86.87 | 1665.34 |
| 2021-22 | 265.55 | 957.81 | 229.13 | 106.33 | 1558.82 |
| 2022-23 | 177.38 | 799.62 | 169.14 | 82.78 | 1228.92 |
| **ಒಟ್ಟು** | **1056.67** | **3471.05** | **929.91** | **369.18** | **5826.81** |

**ಆ.** 2019 ರಿಂದ 2023ರ ವರೆಗೆ ಮೇಲ್ಕಂಡ ಸಾಲಿನಲ್ಲಿ ಈ ಸಂಸ್ಥೆಗಳಲ್ಲಿ ಕಡ್ಡಾಯ ಪಾವತಿಗಳ ನೌಕರರ ಭವಿಷ್ಯ ನಿಧಿ ವಿಮೆ ಇತ್ಯಾದಿಗಳನ್ನು ಪಾವತಿಸಿರುವ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

ರಾಜ್ಯ ರಸ್ತೆ ಸಾರಿಗೆ ನಿಗಮಗಳ 2019ರಿಂದ 2023ರವರೆಗೆ ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಪಾವತಿಸಿರುವ ಮೊತ್ತದ ವಿವರಗಳು ಈ ಕೆಳಕಂಡಂತಿದೆ:

**ಕ.ರಾ.ರ.ಸಾ.ನಿಗಮ.:**

(ರೂ.ಕೋಟಿಗಳಲ್ಲಿ)

| ವರ್ಷ | ಭವಿಷ್ಯ ನಿಧಿ | ಪಿಂಚಣಿ | ವಿಮೆ | ಪಿ.ಎಲ್.ಐ | ಒಟ್ಟು |
|---|---|---|---|---|---|
| 2019-20 | 296.57 | 55.41 | 57.16 | 5.43 | **414.57** |
| 2020-21 | 151.05 | 53.00 | 56.71 | 5.27 | **266.03** |
| 2021-22 | 146.66 | 50.20 | 51.68 | 4.21 | **252.75** |
| 2022-23 | 296.17 | 52.06 | 51.86 | 3.24 | **403.33** |
| **ಒಟ್ಟು** | **890.45** | **210.67** | **217.41** | **18.15** | **1336.68** |

**ಬೆಂ.ಮ.ಸಾ.ಸಂಸ್ಥೆ:**

(ರೂ.ಕೋಟಿಗಳಲ್ಲಿ)

| ವರ್ಷ | ಭವಿಷ್ಯ ನಿಧಿ | ಪಿಂಚಣಿ | ವಿಮೆ | ಪಿ.ಎಲ್.ಐ | ಒಟ್ಟು |
|---|---|---|---|---|---|
| 2019-20 | 7.00 | 49.48 | 30.74 | 3.97 | **91.19** |
| 2020-21 | 650.59 | 44.59 | 46.77 | 3.66 | **745.61** |
| 2021-22 | 352.83 | 42.91 | 32.38 | 3.32 | **431.44** |
| 2022-23 | 250.01 | 45.02 | 28.55 | 2.98 | **326.56** |
| **ಒಟ್ಟು** | **1260.43** | **182.00** | **138.44** | **13.93** | **1594.8** |

**ವಾ.ಕ.ರ.ಸಾ.ಸಂಸ್ಥೆ:**

(ರೂ.ಕೋಟಿಗಳಲ್ಲಿ)

| ವರ್ಷ | ಭವಿಷ್ಯ ನಿಧಿ | ಪಿಂಚಣಿ | ವಿಮೆ | ಪಿ.ಎಲ್.ಐ | ಒಟ್ಟು |
|---|---|---|---|---|---|
| 2019-20 | 211.21 | 34.06 | 28.07 | 0.03 | **273.37** |
| 2020-21 | 70.75 | 32.78 | 27.58 | 0.01 | **131.12** |
| 2021-22 | 4.00 | 31.01 | 29.42 | --* | **64.43** |
| 2022-23 | 250.00 | 35.65 | 29.54 | --* | **315.19** |
| **ಒಟ್ಟು** | **535.96** | **133.5** | **114.61** | **784.07** | **784.11** |

***2021-22 & 2022-23 ನೇ ಸಾಲಿನಲ್ಲಿ ಪಿ.ಎಲ್.ಐ ಮೊತ್ತ ವೇತನದಲ್ಲಿ ಕಡಿತಗೊಂಡಿರುವುದಿಲ್ಲ. ಆದ್ದರಿಂದ ಪಾವತಿಸಿದ ಮೊತ್ತ ಶೂನ್ಯವಿರುತ್ತದೆ.**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

**ಕ.ಕ.ರ.ಸಾ.ನಿಗಮ:**

**(ರೂ.ಕೋಟಿಗಳಲ್ಲಿ)**

<table>
<tr><th>ವರ್ಷ</th><th>ಭವಿಷ್ಯ ನಿಧಿ</th><th>ಪಿಂಚಣಿ</th><th>ವಿಮೆ</th><th>ಪಿ.ಎಲ್.ಐ</th><th>ಒಟ್ಟು</th></tr>
<tr><td>2019-20</td><td>187.98</td><td>29.21</td><td>27.38</td><td>0.42</td><td>**244.99**</td></tr>
<tr><td>2020-21</td><td>177.56</td><td>29.18</td><td>27.60</td><td>0.17</td><td>**234.51**</td></tr>
<tr><td>2021-22</td><td>180.85</td><td>28.28</td><td>24.15</td><td>0.09</td><td>**233.37**</td></tr>
<tr><td>2022-23</td><td>205.59</td><td>27.34</td><td>31.25</td><td>0.03</td><td>**264.21**</td></tr>
<tr><td>**ಒಟ್ಟು**</td><td>**751.98**</td><td>**114.01**</td><td>**110.38**</td><td>**0.71**</td><td>**977.08**</td></tr>
</table>

</td></tr>
<tr><td>ಇ.</td><td>ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ 2023 ಪ್ರಣಾಳಿಕೆಯಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ನೌಕರರನ್ನು ಸಂಬಳ ಮತ್ತು ಸೇವೆಗಳ ವಿಷಯದಲ್ಲಿ ಸರ್ಕಾರಿ ನೌಕರರು ಮತ್ತು ಇತರ ಮಂಡಳಿಗಳು ಮತ್ತು ನಿಗಮಗಳಿಗೆ ಸಮಾನವಾಗಿ ಪರಿಗಣಿಸಲಾಗುವುದು ಎಂದು ಭರವಸೆ ನೀಡಲಾಗಿದ್ದು; ಈ ಭರವಸೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು; ಈ ಭರವಸೆಗೆ ಬೇಕಾಗಿರುವ ಹಣವೆಷ್ಟು; ಈ ಭರವಸೆ ಈಡೇರಿಕೆಯಿಂದ ಸರ್ಕಾರಕ್ಕೆ ಎಷ್ಟು ಹೊರೆಯಾಗುತ್ತದೆ;</td><td>

ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ ಅಗಾಧವಾದ ಸಾಲದ ಹೊರೆಯಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಕೊಳ್ಳಬೇಕಾಗಿತ್ತು.

ಅಲ್ಲದೇ, ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 **(The Road Transport Corporation Act,1950)** ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.

ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನವನ್ನು ಕೈಗಾರಿಕಾ ಒಪ್ಪಂದದನ್ವಯ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರೀಮೆಂಟ್) ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ನಿಗಮಗಳ ಆರ್ಥಿಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರದ ಅನುಮೋದನೆ ಪಡೆದು ವೇತನ ಪರಿಷ್ಕರಣೆಯನ್ನು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ ನೌಕರರಿಗೆ ದಿನಾಂಕ: 31.12.2019ರಂದು ಪಡೆಯುತ್ತಿದ್ದ ಮೂಲವೇತನವನ್ನು ಶೇ.15ರಷ್ಟು ಹೆಚ್ಚಿಸಿ, ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023 ರಿಂದ ಜಾರಿಗೊಳಿಸಲಾಗಿದೆ.

ಮುಂದುವರೆದು, ಮುಂದಿನ ದಿನಗಳಲ್ಲಿ ನಿಗಮಗಳ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಸಾರಿಗೆ ನಿಗಮಗಳ ಅಧಿಕಾರಿ / ನೌಕರರು/ಚಾಲಕ ಮತ್ತು ನಿರ್ವಾಹಕರ ವೇತನ ಪರಿಷ್ಕರಣೆಗೆ ಪರಿಶೀಲಿಸಲಾಗುವುದು.

</td></tr>
<tr><td>ಈ.</td><td>ಪಂಚ ಗ್ಯಾರಂಟಿಯಲ್ಲೊಂದಾದ ಶಕ್ತಿ ಯೋಜನೆಯನ್ನು ಮಹಿಳೆಯರಿಗೆ ಮಾತ್ರ ಸೀಮಿತವಾಗಿದ್ದು, ಈ ಯೋಜನೆಯನ್ನು ಶಾಲಾ ಮತ್ತು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಗಂಡು ಮಕ್ಕಳಿಗೆ ಮತ್ತು ಹಿರಿಯ ನಾಗರೀಕರಿಗೆ ವಿಸ್ತರಿಸಲು ಸರ್ಕಾರ ಯೋಜಿಸುತ್ತಿದೆಯೇ; ಹೌದಾದಲ್ಲಿ ಯಾವ ಕಾಲಮಿತಿಯಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಮತ್ತು ಈ ಯೋಜನೆಗೆ ತಗಲುವ ವೆಚ್ಚವೆಷ್ಟು? (ವಾರ್ಷಿಕ ವೆಚ್ಚ)ದ ವಿವರವನ್ನು ನೀಡುವುದು.</td><td>ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 248 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು